# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಸದಸ್ಯರ ಹೆಸರು | : | ಶ್ರೀ ಕೇಶವ ಪ್ರಸಾದ್ .ಎಸ್.<br>(ವಿದಾನ ಸಭೆಯಿಂದ ಚುನಾಯಿತರಾದವರು) |
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 146(204) |
| ಉತ್ತರಿಸುವ ಸಚಿವರು | : | ಮಾನ್ಯ ಜವಳಿ, ಕಬ್ಬು ಅಭಿವೃದ್ಧಿ ಮತ್ತು ಸಕ್ಕರೆ ಹಾಗೂ ಕೃಷಿ ಮಾರುಕಟ್ಟೆ ಸಚಿವರು |
| ಉತ್ತರಿಸಬೇಕಾದ ದಿನಾಂಕ | : | 10-12-2024 |

*****

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| (ಅ) | ರಾಜ್ಯದಲ್ಲಿ ನೇಕಾರರು ಉತ್ಪಾದಿಸಿದ ಜವಳಿ ವಸ್ತುಗಳಾದ ಸೀರೆ, ಟವೆಲ್, ಜಮಖಾನೆ ಸೇರಿದಂತೆ ಇತರೆ ಜವಳಿ ವಸ್ತುಗಳ ಮಾರುಕಟ್ಟೆ ಕುಸಿದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಜವಳಿ ಮಾರುಕಟ್ಟೆ ಸುಧಾರಣೆಗೆ ಸರ್ಕಾರ ತೆಗೆದುಕೊಂಡ ಕ್ರಮಗಳೇನು; (ಮಾಹಿತಿ ಒದಗಿಸುವುದು) | ಬಂದಿದೆ.<br>ಜವಳಿ ಮಾರುಕಟ್ಟೆ ಸುಧಾರಣೆಗೆ ರಾಜ್ಯ ಸರ್ಕಾರದಿಂದ ಈ ಕೆಳಕಂಡ ಯೋಜನೆಯನ್ನು ಅನುಷ್ಠಾನಗೊಳಿಸಲಾಗುತ್ತಿದೆ.<br><br>• ಕೈಮಗ್ಗ ನೇಕಾರರ ಸಹಕಾರ ಸಂಘಗಳಿಗೆ ಕಚ್ಚಾ ನೂಲು ಖರೀದಿ ಮೇಲೆ ಪ್ರತಿ ಕೆ.ಜಿ. ಗೆ ರೂ.15/- ಸಹಾಯಧನ ನೀಡಲಾಗುತ್ತಿದೆ.<br>• ಕೈಮಗ್ಗ ನೇಕಾರರ ಸಹಕಾರ ಸಂಘಗಳು ಹಾಗೂ ಕೈಮಗ್ಗ ಮಹಾಮಂಡಳಗಳು ವರ್ಷದ 365 ದಿನಗಳು ಮಾರಾಟ ಮಾಡಿದ ಕೈಮಗ್ಗ ಉತ್ಪನ್ನಗಳಿಗೆ ರಾಜ್ಯ ಸರ್ಕಾರದಿಂದ ಶೇಕಡ 20 ರಿಬೇಟ್ ಅನ್ನು ಮರುಪಾವತಿಸಲಾಗುತ್ತಿದೆ.<br>• ರಾಷ್ಟ್ರೀಯ ಕೈಮಗ್ಗ ಮೇಳ (NHE), ರಾಜ್ಯ ಮಟ್ಟದ ಕೈಮಗ್ಗ ಮೇಳ (SHE) ಹಾಗೂ ಜಿಲ್ಲಾ ಮಟ್ಟದ ಕೈಮಗ್ಗ ಮೇಳ (DHE) ಗಳ ಆಯೋಜಿಸಿ ಕೈಮಗ್ಗ ಉತ್ಪನ್ನಗಳ ಮಾರಾಟ ಮೇಳ ಆಯೋಜಿಸಲಾಗುತ್ತಿದೆ.<br>• ಇಳಕಲ್ ಸೀರೆ, ಗುಳೇದಗುಡ್ಡ ಖಣ, ಮೊಳಕಾಲ್ಮೂರು ರೇಷ್ಮೆ ಸೀರೆ ಮತ್ತು ಉಡುಪಿಯ ಕಾಟನ್ ಸೀರೆ ಈ 4 ಉತ್ಪನ್ನಗಳನ್ನು ಜಿ.ಐ ಟ್ಯಾಗ್ (ವಿಶ್ವಮಾನ್ಯತೆ) ಪಡೆದಿರುತ್ತವೆ. ಈ ಎಲ್ಲಾ ಉತ್ಪನ್ನಗಳು ಪಾರಂಪರಿಕವಾಗಿ ಆಯಾ ಪ್ರದೇಶಗಳಲ್ಲಿ ಉತ್ಪಾದಿಸಲಾಗುತ್ತಿದ್ದು, ಇವುಗಳ ಬ್ರ್ಯಾಂಡಿಂಗ್ ಮತ್ತು ಮಾರುಕಟ್ಟೆ ಅಭಿವೃದ್ಧಿಗಾಗಿ ನಬಾರ್ಡ್‌ನೊಂದಿಗೆ ಎಂ.ಓ.ಯು ಮಾಡಿಕೊಳ್ಳಲು ಕ್ರಮವಹಿಸಲಾಗುತ್ತಿದೆ.<br>• ಪರಿಸರ ಸ್ನೇಹಿ ನೈಸರ್ಗಿಕ ಕೈಮಗ್ಗ ವಸ್ತ್ರಗಳಿಗೆ ಜಾಗತಿಕ ಮಾರುಕಟ್ಟೆಯಲ್ಲಿ ಹೆಚ್ಚುತ್ತಿರುವ ಬೇಡಿಕೆಯ ಹಿನ್ನೆಲೆಯಲ್ಲಿ ಕೈಮಗ್ಗ ವಲಯದಲ್ಲಿ ಸುಸ್ಥಿರ ಉದ್ಯೋಗ ಒದಗಿಸಲು "ಮಹಾತ್ಮಗಾಂಧಿ ವಸ್ತ್ರೋದ್ಯಮ ಕೋಶ" ವನ್ನು ಕಂಪನಿ ಕಾಯ್ದೆಯ ಸಕ್ಷನ್ 8 ರನ್ವಯ ರೂ.1.00 ಕೋಟಿಗಳ ಸಣ್ಣ ಶೇರು ಬಂಡವಾಳ ಮೂಲದೊಂದಿಗೆ (ಸರ್ಕಾರದಿಂದ ರೂ.49.00 ಲಕ್ಷಗಳು ಮತ್ತು ಖಾಸಗಿ ಹೂಡಿಕೆದಾರರಿಂದ [Private Stakeholders] ರೂ.51.00 ಲಕ್ಷಗಳು) ಸ್ಥಾಪಿಸಲು ಕ್ರಮವಹಿಸಲಾಗುತ್ತಿದೆ. |

...2

| | | |
|---|---|---|
| (ಆ) | ಜವಳಿ ಉತ್ಪಾದನೆ ರಫ್ತು ಹಾಗೂ ರಾಜ್ಯದ ನೇಕಾರಿಕೆ ವಲಯದಲ್ಲಿ ಉದ್ಯೋಗ ಸೃಷ್ಟಿಗೆ ಸರ್ಕಾರ ರೂಪಿಸಿರುವ ಯೋಜನೆಗಳು ಯಾವುವು; | ಕೈಮಗ್ಗ ಮತ್ತು ಜವಳಿ ಇಲಾಖೆಯಿಂದ ಜವಳಿ ಕ್ಷೇತ್ರದಲ್ಲಿ ಹಾಗೂ ನೇಕಾರಿಕೆ ವಲಯದಲ್ಲಿ ಉದ್ಯೋಗ ಸೃಷ್ಟಿಗೆ ರಾಜ್ಯ ಸರ್ಕಾರದಿಂದ ಈ ಕೆಳಕಂಡ ಯೋಜನೆಗಳನ್ನು ಅನುಷ್ಠಾನಗೊಳಿಸಲಾಗುತ್ತಿದೆ.<br>• ಕೈಮಗ್ಗ ವಿಕಾಸ ಯೋಜನೆಯಡಿ ಹೊಸ ಕೈಮಗ್ಗ ಹಾಗೂ ಅಗತ್ಯ ಸಲಕರಣೆಗಳನ್ನು ಖರೀದಿಸಲು ಘಟಕ ವೆಚ್ಚದ ಶೇ.50 ರಷ್ಟು ಸಹಾಯಧನ ಒದಗಿಸುವುದು.<br>• ಕೈಮಗ್ಗಗಳಿಗೆ ಮೋಟರೈಸ್ಡ್ ಜಕಾರ್ಡ್ ಸಲಕರಣೆಗಳ ಕಿಟ್ ಒದಗಿಸಲು ಪ್ರತಿ ಘಟಕಕ್ಕೆ ವೆಚ್ಚವಾಗುವ ಮೊತ್ತಕ್ಕೆ ಸರ್ಕಾರದ ವತಿಯಿಂದ ಸಾಮಾನ್ಯ ವರ್ಗದವರಿಗೆ ಶೇ.50 ರಷ್ಟು ಸಹಾಯಧನ ಹಾಗೂ ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡದ ಫಲಾನುಭವಿಗಳಿಗೆ ಶೇ.90 ರಷ್ಟು ಸಹಾಯಧನವನ್ನು ಒದಗಿಸುವುದು.<br>• ನೇಕಾರರು ನೇಕಾರಿಕೆ ಉದ್ದೇಶಕ್ಕಾಗಿ ಸಹಕಾರ ಸಂಘ / ಸಹಕಾರ ಬ್ಯಾಂಕ್‌ಗಳಿಂದ ಪಡೆಯುವ ಸಾಲಕ್ಕೆ ಶೂನ್ಯ ಹಾಗೂ ಶೇ.1 ಬಡ್ಡಿ ದರದಲ್ಲಿ ರೂ.2.00 ಲಕ್ಷಗಳವರೆಗೆ, ಶೇ.3 ರ ಬಡ್ಡಿ ದರದಲ್ಲಿ ರೂ.2.00 ಲಕ್ಷಗಳಿಂದ ರೂ.5.00 ಲಕ್ಷಗಳವರೆಗೆ ಸಾಲ ನೀಡಲಾಗುವುದು.<br>• ನೇಕಾರರು ನೇಕಾರಿಕೆ ಉದ್ದೇಶಕ್ಕಾಗಿ ಸಹಕಾರ ಸಂಘ / ಸಹಕಾರ ಬ್ಯಾಂಕ್ / ವಾಣಿಜ್ಯ ಬ್ಯಾಂಕ್‌ಗಳಿಂದ ಪಡೆಯುವ ಸಾಲಕ್ಕೆ ಶೇ.8 ರಷ್ಟು ಬಡ್ಡಿ ಸಹಾಯಧನ ನೀಡಲಾಗುವುದು.<br>• ಉಣ್ಣೆ ವಲಯ ಪುನಃಶ್ಚೇತನ ಮತ್ತು ಬಲವರ್ಧನೆ ಯೋಜನೆಯಡಿ ಸಹಾಯಧನ.<br>• 02 ವಿದ್ಯುತ್ ಮಗ್ಗ ಖರೀದಿಗೆ ಸಹಾಯಧನ.<br>• ಎಲೆಕ್ಟ್ರಾನಿಕ್ ಜಕಾರ್ಡ್ ಖರೀದಿಗೆ ಸಹಾಯಧನ.<br>• ಮಗ್ಗ ಪೂರ್ವ ಸೌಲಭ್ಯ ಒದಗಿಸುವುದು.<br>• ಸೈಜಿಂಗ್ ಘಟಕ ಸ್ಥಾಪನೆಗೆ ಸಹಾಯಧನ.<br>• ಮಿನಿ ಪವರ್‌ಲೂಮ್ ಪಾರ್ಕ್ ಸ್ಥಾಪನೆಗೆ ಸಹಾಯಧನ.<br>• ಪ್ರೊಸೆಸ್ಸಿಂಗ್ ಘಟಕ ಸ್ಥಾಪನೆಗೆ ಸಹಾಯಧನ.<br>• ವಿದ್ಯುತ್ ರಿಯಾಯಿತಿ ಸಹಾಯಧನ – 01 ರಿಂದ 10 ಹೆಚ್.ಪಿ ವಿದ್ಯುತ್ ಸಂಪರ್ಕ ಪಡೆದ ವಿದ್ಯುತ್ ಮಗ್ಗ ಹಾಗೂ ಮಗ್ಗ ಪೂರ್ವ ಘಟಕಗಳಿಗೆ ಉಚಿತವಾಗಿ ವಿದ್ಯುತ್ ಪೂರೈಸಿ ಶೂನ್ಯ ಬಿಲ್ ನೀಡಲಾಗುತ್ತಿದೆ ಹಾಗೂ 10.01 ರಿಂದ 20 ಹೆಚ್.ಪಿ ವಿದ್ಯುತ್ ಸಂಪರ್ಕ ಪಡೆದ ವಿದ್ಯುತ್ ಮಗ್ಗ ಹಾಗೂ ಮಗ್ಗ ಪೂರ್ವ ಘಟಕಗಳಿಗೆ ಬಳಸಿದ ಒಟ್ಟು ಯೂನಿಟ್‌ಗಳಿಗೆ ಪ್ರತಿ ಯೂನಿಟ್‌ಗೆ ರೂ.1.25 ರಂತೆ ವಿದ್ಯುತ್ ಶುಲ್ಕವನ್ನು (Energy Charges) ಘಟಕದವರು ಪಾವತಿಸುವುದು. ಬಾಕಿ ಉಳಿಯುವ ವಿದ್ಯುತ್ ಶುಲ್ಕದ ಮೊತ್ತವನ್ನು ಮಾತ್ರ ಸರ್ಕಾರದ ಬೊಕ್ಕಸದಿಂದ ಭರಿಸಲಾಗುತ್ತಿದೆ.<br>• 150 ಹೆಚ್.ಪಿ ವರೆಗಿನ ವಿದ್ಯುತ್ ಸಂಪರ್ಕ ಹೊಂದಿರುವ ರೇಪಿಯರ್ / ಲಾಳಿರಹಿತ ವಿದ್ಯುತ್ ಮಗ್ಗ ಘಟಕಗಳಿಗೆ ಶೇ.50 ರಷ್ಟು ವಿದ್ಯುತ್ ಸಹಾಯಧನ ಒದಗಿಸಲಾಗುವುದು.<br>• 20 ಹೆಚ್.ಪಿ ಇಂದ 200 ಹೆಚ್.ಪಿ ವರೆಗಿನ ವಿದ್ಯುತ್ ಸಂಪರ್ಕ ಹೊಂದಿರುವ SCSP / TSP ವಿದ್ಯುತ್ ಮಗ್ಗ ಘಟಕಗಳಿಗೆ Energy Charges ನಲ್ಲಿ ಶೇ.50 ರಷ್ಟು ವಿದ್ಯುತ್ ಸಹಾಯಧನ ಒದಗಿಸಲಾಗುವುದು. |

| | | |
|---|---|---|
| | | • ಸಹಕಾರಿ ನೂಲಿನ ಗಿರಣಿಗಳನ್ನು ಪ್ರೋತ್ಸಾಹಿಸಲು ಪ್ರತಿ ಯೂನಿಟ್ ವಿದ್ಯುತ್ ರೂ.2/- ಸಹಾಯಧನ.<br>• ಸಹಕಾರಿ ನೂಲಿನ ಗಿರಣಿಗಳು ಭಾರತೀಯ ಹತ್ತಿ ನಿಗಮ (Cotton Corporation of India) ದಿಂದ ಖರೀದಿಸಿದ ಹತ್ತಿಯ ಮೌಲ್ಯದ ಮೇಲೆ ಶೇ.5% ರಷ್ಟು ಸಹಾಯಧನ.<br>• ಎಸ್.ಸಿ.ಎಸ್.ಪಿ / ಟಿ.ಎಸ್.ಪಿ ರಡಿ ಜವಳಿ ಕ್ಷೇತ್ರಕ್ಕೆ ಸಂಬಂಧಿಸಿದ ಸಣ್ಣ ಮತ್ತು ಅತಿ ಸಣ್ಣ (ಎಸ್.ಎಂ.ಇ) ಘಟಕಗಳ ಸ್ಥಾಪನೆಗೆ ಸಹಾಯಧನ.<br>• ನೂತನ ಜವಳಿ ನೀತಿ ಯೋಜನೆಯಡಿ ಸಿದ್ಧ ಉಡುಪು / ಜವಳಿ ಘಟಕಗಳಿಗೆ ಈ ಕೆಳಕಂಡ ರಿಯಾಯಿತಿ / ಪ್ರೋತ್ಸಾಹನಗಳನ್ನು ನೀಡಲಾಗುವುದು.<br>➢ ಸಾಲಾಧಾರಿತ ಬಂಡವಾಳ ಸಹಾಯಧನ<br>➢ ಬಡ್ಡಿ ಸಹಾಯಧನ<br>➢ ವಿದ್ಯುತ್‌ಚ್ಛಕ್ತಿ ಮರುಪಾವತಿ ಸಹಾಯಧನ<br>➢ ಇ.ಎಸ್.ಐ & ಇ.ಪಿ.ಎಫ್ ಮರುಪಾವತಿ ಸಹಾಯಧನ<br>➢ ವೇತನ ಸಹಾಯಧನ<br>➢ ಮುದ್ರಾಂಕ ಶುಲ್ಕ ವಿನಾಯಿತಿ & ನೋಂದಣಿ ಶುಲ್ಕ ರಿಯಾಯಿತಿ<br>➢ ತ್ಯಾಜ್ಯ ಸಂಸ್ಕರಣಾ ಘಟಕಕ್ಕೆ ಸಹಾಯಧನ |
| (ಇ) | ಕರೋನ ಲಾಕ್‌ಡೌನ್ ಹಾಗೂ ಅದರ ನಂತರದ ಅವಧಿಯಲ್ಲಿ ರಾಜ್ಯದಲ್ಲಿ ಆತ್ಮಹತ್ಯೆ ಮಾಡಿಕೊಂಡ ನೇಕಾರರ ನಿಖರ ಸಂಖ್ಯೆ ಎಷ್ಟು; (ಜಿಲ್ಲಾವಾರು ವಿವರ ನೀಡುವುದು) | ಕರೋನ ಲಾಕ್‌ಡೌನ್ ಹಾಗೂ ಅದರ ನಂತರದ ಅವಧಿಯಲ್ಲಿ ರಾಜ್ಯದಲ್ಲಿ ಒಟ್ಟು 49 ನೇಕಾರರು ಆತ್ಮಹತ್ಯೆ ಮಾಡಿಕೊಂಡಿರುತ್ತಾರೆ. ಜಿಲ್ಲಾವಾರು ವಿವರ ಇಂತಿದೆ. (see table below) |
| (ಈ) | ಆತ್ಮಹತ್ಯೆ ಮಾಡಿಕೊಂಡ ನೇಕಾರರಿಗೆ ಸರ್ಕಾರ ಪರಿಹಾರ ನೀಡಿದೆಯೇ; ನೇಕಾರರ ಆತ್ಮಹತ್ಯೆ ತಡೆಗಟ್ಟುವಲ್ಲಿ ಸರ್ಕಾರ ಕೈಗೊಂಡ ಕ್ರಮಗಳೇನು? | ಆತ್ಮಹತ್ಯೆ ಮಾಡಿಕೊಂಡ ನೇಕಾರರಲ್ಲಿ 25 ನೇಕಾರರ ಕುಟುಂಬಗಳಿಗೆ CMRF COVID-19 ವತಿಯಿಂದ ತಲಾ ರೂ.5.00 ಲಕ್ಷಗಳಂತೆ ಒಟ್ಟು ರೂ.125.00 ಲಕ್ಷಗಳ ಪರಿಹಾರಧನ ನೀಡಲಾಗಿರುತ್ತದೆ.<br><br>ಉಳಿದ 17 ನೇಕಾರರ ಪ್ರಸ್ತಾವನೆಗಳನ್ನು ಮೃತ ನೇಕಾರರು ಪ್ರಧಾನ ಮಂತ್ರಿ ಜೀವನ್ ಜ್ಯೋತಿ ಬಿಮಾ ಯೋಜನೆ (PMJJBY) ಅಡಿ ನೊಂದಾಯಿಸಿಕೊಂಡಿದ್ದಲ್ಲಿ ಈ ಯೋಜನೆಯಡಿ ಪರಿಹಾರಧನ ಪಡೆಯಲು ಹಿಂಬರಹ ನೀಡಲಾಗಿರುತ್ತದೆ.<br><br>07 ನೇಕಾರರ ಪ್ರಸ್ತಾವನೆಗಳನ್ನು ಅರ್ಹ ದಾಖಲಾತಿಗಳಿಲ್ಲದ ಕಾರಣ ಪ್ರಸ್ತಾವನೆಯನ್ನು ಹಿಂದಿರುಗಿಸಲಾಗಿರುತ್ತದೆ. |

| ಕ್ರಸಂ | ಜಿಲ್ಲೆ | ನೇಕಾರರ ಸಂಖ್ಯೆ |
|---|---|---|
| 1 | ಧಾರವಾಡ | 1 |
| 2 | ಬೆಳಗಾವಿ | 27 |
| 3 | ರಾಮನಗರ | 3 |
| 4 | ಬೆಂಗಳೂರು ನಗರ | 1 |
| 5 | ಬೆಂ. ಗ್ರಾಮಾಂತರ | 4 |
| 6 | ಚಿಕ್ಕಬಳ್ಳಾಪುರ | 1 |
| 7 | ಬಾಗಲಕೋಟೆ | 7 |
| 8 | ತುಮಕೂರು | 4 |
| 9 | ವಿಜಯಪುರ | 1 |
| | **ಒಟ್ಟು** | **49** |

...4

| | | |
|---|---|---|
| | | ಆತ್ಮಹತ್ಯೆ ಮಾಡಿಕೊಂಡ ನೇಕಾರರಿಗೆ ಪರಿಹಾರಧನ ಒದಗಿಸಲು ಇಲಾಖೆಯಲ್ಲಿ ಯಾವುದೇ ಯೋಜನೆಯು ಇರುವುದಿಲ್ಲ.<br><br>ಆತ್ಮಹತ್ಯೆ ಮಾಡಿಕೊಂಡಿರುವ ಸದರಿ ನೇಕಾರರುಗಳು Pradhan Mantri Jeevan Bima Yojana (PMJJBY) / Pradhan Mantri Suraksha Bima Yojana (PMSBY) ವಿಮಾ ಯೋಜನೆಯಡಿಯಲ್ಲಿ ನೋಂದಾಯಿಸಿಕೊಂಡಿದ್ದಲ್ಲಿ ಪರಿಶೀಲಿಸಿ ರೂ.2.00 ಲಕ್ಷಗಳ ವಿಮಾ ಪರಿಹಾರ ಒದಗಿಸುವಲ್ಲಿ ಸಂಬಂಧಪಟ್ಟ ಬ್ಯಾಂಕ್‌ನವರೊಂದಿಗೆ ಸಮನ್ವಯಿಸಿ ತ್ವರಿತವಾಗಿ ಪರಿಹಾರ ಒದಗಿಸಲು ಕ್ರಮವಹಿಸಲಾಗುವುದು. |

**ಸಂಖ್ಯೆ: CI 242 JAKE 2024**

(ಶಿವಾನಂದ ಎಸ್. ಪಾಟೀಲ)

**ಜವಳಿ, ಕಬ್ಬು ಅಭಿವೃದ್ಧಿ ಮತ್ತು ಸಕ್ಕರೆ ಹಾಗೂ ಕೃಷಿ ಮಾರುಕಟ್ಟೆ ಸಚಿವರು**